ಕಾರವಾರ ಬಂದರಿನ ಹೂಳೆತ್ತುವಿಕೆಯ ಗಂಭೀರ ಸಮಸ್ಯೆಯ ತುರ್ತು ಪರಿಹಾರವಾಗಿ ಸುಮಾರು (–) 8 50 ಮೀ ಆಳದವರೆಗೆ ಹೂಳೆತ್ತುವಿಕೆಯ ಕಾಮಗಾರಿಯನ್ನು ASIDE ಯೋಜನೆಯಡಿಯಲ್ಲಿ ಕೈಗೊಳ್ಳಲಾಗುವುದು ಮತ್ತು ಇನ್ನೂ (–) 10 ಮೀ ಆಳದವರೆಗೆ ಹೂಳೆತ್ತುವ ಹಾಗೂ ಇನ್ನೂ 240 ಮೀಟರ್ ಉದ್ದಕ್ಕೆ ಅಲೆತಡೆಗೋಡೆ ವಿಸ್ತರಿಸುವ ಪ್ರಸ್ತಾವನೆಗಳೂ ಸರ್ಕಾರದ ಪರಿಶೀಲನೆಯಲ್ಲಿದೆ

343 (343) ಶ್ರೀ ಗಂಗಾಧರ್ ನಾಗೇಶ್ ಭಟ್ (ಕಾರವಾರ) ಮಾನ್ಯ ಸಾರಿಗೆ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಉತ್ತರ ಕನ್ನಡ ಜಿಲ್ಲೆಯ ಕೇಂದ್ರಸ್ಥಳವಾದ ಕಾರವಾರದಿಂದ ಬೆಂಗಳೂರಿಗೆ ಹಾಗೂ ಮುಂಬಯಿ, ವಿಜಾಪುರ ಗುಲ್ಬರ್ಗಾ ಕೊಲ್ಲಾಪುರ, ಪುಣೆ, ಬೆಳಗಾವಿ ಮತ್ತು ಶಿವಮೊಗ್ಗ ಈ ಸ್ಥಳಕ್ಕೆ ಬಿಡುವ ಬಸ್ಸುಗಳು ತೀರಾ ಹಳೆಯದಾಗಿದ್ದು, ಈ ವಿಷಯವು ಸರ್ಕಾರದ ಗಮನಕ್ಕೆ ಬಂದಿದೆಯೇ,

ಆ) ಹಾಗಿದ್ದಲ್ಲಿ ಸರ್ಕಾರವು ಈ ಸ್ಥಳಗಳಿಗೆ ಹೊಸ ಬಸ್ಸುಗಳನ್ನು ಎಂದಿನಿಂದ ಪ್ರಾರಂಭಿಸಲಾಗುವುದು?

ಶ್ರೀ ಎನ್ ಚಲುವರಾಯಸ್ವಾಮಿ (ಸಾರಿಗೆ ಸಚಿವರು)

ಅ) ಬಂದಿದೆ

ಆ) ಪ್ರಸಕ್ತ ಆರ್ಥಿಕ ವರ್ಷದಲ್ಲಿ ಕಾರವಾರ ಘಟಕಕ್ಕೆ ಈಗಾಗಲೇ 8 ಹೊಸ ಬಸ್ಸುಗಳನ್ನು ಒದಗಿಸಲಾಗಿದೆ ಸದರಿ ಮಾರ್ಗ ---- ಹೊಸ ಬಸ್ಸುಗಳನ್ನು ಒದಗಿಸಲು ಕ್ರಮ ಜರುಗಿಸಲಾಗುವುದು

344 (316) ಶ್ರೀ ಗೋಪಾಲ ಪೂಜಾರಿ ಕೆ (ಬೈಂದೂರು) . ಮಾನ್ಯ ಲೋಕೋಪಯೋಗಿ ಹಾಗೂ ಇಂಧನ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕುಂದಾಪುರ ತಾಲ್ಲೂಕು ಮರವಂತೆ ಗ್ರಾಮದಲ್ಲಿ ಮಾರಸ್ವಾಮಿ ದೇವಸ್ಥಾನದ ಸಮೀಪ ಸೌಪರ್ಣಿಕಾ ನದಿಗೆ ಸೇತುವೆ ನಿರ್ಮಾಣ ಮಾಡಲು ಸರ್ಕಾರಕ್ಕೆ ಪ್ರಸ್ತಾವನೆ ಬಂದಿದೆಯೇ,

ಆ) ಬಂದಿರುವ ಪ್ರಸ್ತಾವನೆ ಈಗ ಯಾವ ಹಂತದಲ್ಲಿದೆ?

ಶ್ರೀ ಹೆಚ್ ಡಿ ರೇವಣ್ಣ (ಲೋಕೋಪಯೋಗಿ ಹಾಗೂ ಇಂಧನ ಸಚಿವರು)

ಅ) ಹೌದು, ಬಂದಿದೆ

ಆ) ನಬಾರ್ಡ್ ಸಾಲ ಸಹಾಯದ ಆರ್ ಐ ಡಿ ಎಫ್ 12ರ ಯೋಜನೆಯಡಿ ಪ್ರಸ್ತಾವನೆಯು ಸ್ವೀಕೃತವಾಗಿದ್ದು, ಪ್ರಸ್ತುತ ಇದನ್ನು ಪರಿಗಣಿಸಲಾಗಿರುವುದಿಲ್ಲ